



ಅಂತೂ ಕ್ಯಾಮೆರಾಕ್ಕೆ ಸಿಕ್ಕಿತು ಹುಲಿ

ನಮಗೆ ಕಂಡನು. ಸರಸರನೆ ಓಡಿಬಂದು ಮತ್ತೆ ಅದೇ ಜೀಪಿನಲ್ಲಿ ವಕ್ಕರಿಸಿದೆವು. ಮತ್ತೆ ಬಿಡುವಿಲ್ಲದ ಅವಸರದ ಪ್ರಯಾಣ ಶುರುವಾಯಿತು. ದುರ್ಗಮ ಕಾಡಿನ ಹಾದಿಯಲ್ಲಿ ಸುಮಾರು ಮುಕ್ಕಾಲು ಗಂಟೆಗಳ ಪ್ರಯಾಣ. ಆ ರಸ್ತೆ ಅದೆಷ್ಟು ಭೀಕರವಾಗಿತ್ತು ಎನ್ನುವುದನ್ನು ವಿವರಿಸಲಿಕ್ಕೆ ಪದಗಳೇ ಸಿಗುವುದಿಲ್ಲ. ಒಂದು ಕಡೆ ಹಸಿವು, ಮತ್ತೊಂದು ಕಡೆ ಮೈಕೈನೋವು, ಜೊತೆಗೆ ಭೀಕರ ಪ್ರಯಾಣ, ಹೆಣಭಾರದ ಆಯಾಸ ಎಲ್ಲವೂ ಒಟ್ಟಿಗೆ ಅಟಕಾಯಿಸಿಕೊಂಡು ಈ ಸುಡುಗಾಡು ಫೋಟೋಗ್ರಫಿಯೇ ಬೇಡಪ್ಪ ಎನ್ನುವಂತಾಯಿತು.

'ಇವತ್ತು ಹುಲಿಗಳು ಸಿಕ್ಕೇಸಿಗುವ ಚಾನ್ಸ್ ಜಾಸ್ತಿ ಇದೆ. ಮೂರು ನಾಲ್ಕು ದಿನದಿಂದ ಸೈಟಿಂಗ್ ಆಗದೆ ಗೆಸ್ಟ್ ಬೇಜಾರಾಗಿ ವಾಪಸ್ಸು ಹೋಗಿದ್ದಾರೆ. ನಿಮಗೆ ಮಿಸ್ ಆಗೋದು ಬೇಡಾಂತ ಎಲ್ಲಾ ಕಡೆ ಅವಸರ, ಗಡಿಬಿಡಿ, ಗಾಬರಿ ಮಾಡ್ತಾ ಇದ್ದೇನೆ. ನಂಗೊತ್ತು, ನಿಮಗೆ ತೊಂದರೆ, ಕಸಿವಿಸಿ ಆಗ್ತಾ ಇದೆ. ದಯಮಾಡಿ ಕ್ಷಮಿಸಿ. ನೀವು ಇವತ್ತು ಇದೆಲ್ಲಾ ಸಹಿಸಿಕೊಳ್ಳಲೇಬೇಕು' ಎಂದು ಆತ ವಿನಯವಾಗಿ ಹೇಳಿದ. ಮೊದಮೊದಲು ಯಮನಂತೆ ಭಾಧಿಸಿ, ಸಿಡುಕನಂತೆ ಕಂಡ ಆದಿಲ್ಲನ ವೃತ್ತಿಬದ್ಧತೆ ಇಷ್ಟವೆನಿಸಿತು. 'ಅಯ್ಯೋ ಛಾಯಾಗ್ರಹಣದಲ್ಲಿ ಇವೆಲ್ಲಾ ಕಾಮನ್ ಅಲ್ವಾ! ನಾವು ಎಂಥೆಂಥವೋ ಕಷ್ಟ ಅನುಭವಿಸಿದ್ದೀವಿ. ಇದೆಲ್ಲಾ ಏನು ಮಹಾ ಬಿಡಿ' ಎಂದು ಸುಖಾಸುಮ್ಮನೆ ಕೊಚ್ಚಿಕೊಂಡೆವು. 'ಕೇವಲ ಫೋಟೋಗ್ರಫಿ ಮಾಡೋದೇ ಮುಖ್ಯವಲ್ಲ. ಫೋಟೋದಾಚೆಗೆ ಸಿಗುವ ಇಂಥ ಜೀವನಾನುಭವವೂ ಮುಖ್ಯ. ಕಷ್ಟಪಟ್ಟು ತೆಗೆದ ಚಿತ್ರವೇ ಮನಸಲ್ಲಿ, ಬದುಕಲ್ಲಿ ಉಳಿಯುವುದು' ಎಂದು ಲೋಕೇಶ್ ಮೊಸಳೆಯವರು ತಮ್ಮ ಫಿಲಾಸಫಿಯ ಭಾಷಣ ಬಿಚ್ಚಿಟ್ಟರು. 'ಹುಲಿ ಸಿಗುತ್ತೆ' ಎನ್ನುವ ಏಕೈಕ ಆಸೆ ಹುಟ್ಟಿದ ಕಾರಣಕ್ಕೆ ನಾವು ಆದ ಎಲ್ಲ ತೊಂದರೆ ತಾಪತ್ರಯಗಳ ಮರೆತು ಅವರಿಬ್ಬರ ಮಾತಿಗೆ ಸಮ್ಮತಿ ಸೂಚಿಸಿ ಲೋಕಾಭಿರಾಮದ ಕೃತಕ ನಗೆ ಚೆಲ್ಲಿದೆವು.

ಈ ಶಿಕಾರಿ ಮತ್ತು ಫೋಟೋಗ್ರಫಿಯ ನಡವಳಿಕೆಗಳೆರಡೂ ಒಂದೇ ಮಾದರಿಯವು. ಪ್ರಾಣಿಗಳು ಬರುವ ದಾರಿ ಹೊಂಚು ಹಾಕಿ ಕಾಯುವುದು, ಅವುಗಳ ನಡವಳಿಕೆ ಅರ್ಥ ಮಾಡಿಕೊಳ್ಳುವುದು, ಬೇಸರ ಮಾಡಿಕೊಳ್ಳದೆ ಗಂಟೆ, ದಿನಗಳ ಸವೆಸುವುದು ಸಾಮಾನ್ಯ ಸಂಗತಿಗಳು. ಇದೊಂದು ಬಗೆಯ ಧ್ಯಾನದ ಸ್ಥಿತಿ ಎಂದು ಭಾವಿಸಿಕೊಳ್ಳಬಹುದು. ವ್ಯತ್ಯಾಸ ಎಂದರೆ ಶಿಕಾರಿ ಕೊಲ್ಲುವ, ಮೆಲ್ಲುವ ಮನಸ್ಥಿತಿಯಾದರೆ; ಛಾಯಾಗ್ರಹಣ ಸೆರೆಹಿಡಿಯುವ, ಸೊಬಗು ಆಸ್ವಾದಿಸುವ ಖುಷಿಯ ಮನೋಭಾವ. ಚಿತ್ರಿಸಿದ ಚಿತ್ರವನ್ನು ಎಲ್ಲರಿಗೂ ತೋರಿಸಿ ನಲಿದಾಡುವ, ಆದ ಜೀವನನುಭಗಳ ಹೀಗೆ ಕೊರೆದು ತಲೆ ತಿನ್ನುವ ಜಾಯಮಾನ.

ನಾವು ನೋಡಲೆಂದು ಹೋದ ಹುಲಿಗೆ ಎರಡು ಮಕ್ಕಳಿದ್ದವು. ವರ್ಷದ ಹರೆಯದ ಅವುಗಳಿಗೆ ತಾಯಿ ಬೇಟೆ ಕಲಿಸುತ್ತಿತ್ತು. ದಟ್ಟವಾದ ಹುಲ್ಲಿನ ಪೊದೆಯ ನಡುವೆ ಅವು ಬೀಡು ಬಿಟ್ಟಿದ್ದವು. ಪಕ್ಕದಲ್ಲಿ ಹರಿಯುವ ನದಿಗೆ ಸ್ನಾನಕ್ಕೆ ಬರುವ ಮುನ್ಸೂಚನೆ ಸಿಕ್ಕಿತ್ತು. ಅವು ಸಾಮಾನ್ಯವಾಗಿ ನೀರಿಗೆ ಇಳಿಯಬಹುದಾದ ಒಂದು ಜಾಗದ ಬದಿಯಲ್ಲಿ ನಮ್ಮ ಜೀಪನ್ನು ಆದಿಲ್ ನಿಲ್ಲಿಸಿದ. ಈಗ ಸುಮ್ಮನೆ ಕೂತು ಕಾಯುವ ಸರದಿ ಶುರುವಾಯಿತು.